ಕಥೆ

# ಸ್ವರ್ಗ ಪ್ರಾಪ್ತಿ...?

■ ಸಂತೋಷಕುಮಾರ ಮೆಹೆಂದಳೆ

ಚಿತ್ರ: ಗುರು ನಾವಳ್ಳಿ

### ಯುದ್ಧ ಮುಗಿದಿತ್ತು...

ಯುಧಿಷ್ಠಿರ ಅಳಿದುಳಿದ ರಾಜಪರಿವಾರಕ್ಕೆ ಮಹಾರಾಜನಾಗಿ ಪಟ್ಟವೇರಿದ್ದ. ಆದರೆ ರಾಜ್ಯದಲ್ಲಿ ಸೈನಿಕರು ಸಾಯಲಿ, ಜನರೇ ಇರಲಿಲ್ಲ. ಮನೆಯ ಪ್ರತಿಯೊಬ್ಬ ಗಂಡಸೂ ಯುದ್ಧಕ್ಕೆ ಆಹುತಿಯಾಗಿದ್ದರು. ಏನಿದ್ದರೂ ಊರ ತುಂಬ, ಭೂಮಿಯ ತುಂಬ ಉಳಿದಿದ್ದು ಕೇವಲ ವಿಧವೆಯರು. ಗಂಡಸರನ್ನು ಕಳೆದುಕೊಂಡು ದಿಕ್ಕೆಟ್ಟವರು. ಬೀದಿಗೆ ಬಿದ್ದ ಮಕ್ಕಳು. ಅರಮನೆಯಲ್ಲಿ ಕನಿಷ್ಠ ಕಾಲಾಳುಗಳೂ ಉಳಿದಿರಲಿಲ್ಲ. ಇದ್ದಬದ್ದವರನ್ನೆಲ್ಲ ಪಾಂಡವರ ಸೈನ್ಯದವರು ಯುದ್ಧೋನ್ಮಾದದಲ್ಲಿ ಹುಡುಹುಡುಕಿ ಕೊಂದುಬಿಟ್ಟಿದ್ದರಲ್ಲ.

ಹಾಗೆ ಕೊಲ್ಲುವುದೇ ಧರ್ಮ ಎಂಬಂತೆ ವಾಸುದೇವನೂ ಹಿರಿಯರಾದಿಯಾಗಿ ಎಲ್ಲರನ್ನೂ ಸಾಮೂಹಿಕ ಯುದ್ಧಕ್ಕೆ ಬಲಿಯಾಗಿಸಲು ಬೆಂಬಲಿಸಿ ಮಮಃ ಪ್ರಾಣಾಹಿ ಪಾಂಡವಾ ಎನ್ನುವ ಮಾತಿಗೆ ಕಾಲೂರಿ ನಿಂತಿದ್ದು, ಇತರರಿಗೂ ನ್ಯಾಯಾನ್ಯಾಯಗಳ ವಿವೇಚನೆಯ ಪರಿಧಿಯಾಚೆಗೆ ತಲುಪಿಸಿಬಿಟ್ಟಿತ್ತು. ದುರ್ಯೋಧನ ತನ್ನ ಕೊನೆಯ ಕ್ಷಣಗಳ ಮಾತುಗಳಲ್ಲಿ ಹೇಳಿದಂತೆ ರಾಜ್ಯವನ್ನು ಆಳಲು, ಅರಸನಾಗಲು ಏನೆಂದರೆ ಏನೂ ಉಳಿದಿರಲಿಲ್ಲ. ಆದರೂ ರಾಜ್ಯಭಾರ ಮಾಡಿದ ಧರ್ಮರಾಯ. ಇದ್ದ ಮುದಿಬಿದ್ದ ರಾಜಪರಿವಾರಕ್ಕೆ ಮಹಾರಾಜನಾದ.

ಹಾಗೆ ಎಲ್ಲ ವಿಪ್ಲವ ಮತ್ತು ವೈಧವ್ಯದ ಸರಕಿನ ದುಗುಡದ ಮಧ್ಯೆ ಹತ್ತಾರು ವರ್ಷ ಕಾಲ ಆಳ್ವಿಕೆ ಎಂಬ ಚಲನೆಯ ಅಗತ್ಯವಿಲ್ಲದ ರಾಜ್ಯಭಾರ ಮಾಡಿದ. ಕಾರಣ ಯಾವ ವಿರೋಧವೂ ಯಾವ ಏರಿಳಿತಗಳೂ ಇಲ್ಲ. ಅದೆಲ್ಲ ಮಾಡಲು ಭೂಮಿಯ ಮೇಲೆ ಜನವೇ ಇಲ್ಲದ ಪರಿಸ್ಥಿತಿಯಲ್ಲಿ ಬೇರೇನು ಮಾಡಲು ಸಾಧ್ಯವಿತ್ತು. ಎಲ್ಲೆಲ್ಲೂ ಬದುಕು ಮಸುಕು ಮಸುಕು ಅನ್ನಿಸುತ್ತಿತ್ತು. ಸುಖ ಸಂತೋಷ ಆಮೋದಗಳಿಗೆ ಯಾರೂ ಇರಲೇ ಇಲ್ಲ ಎನ್ನುವಂತಹ ಜೀವಸತ್ವವೇ ಇಲ್ಲದ ಭೂಮಿಯ ಮೇಲೆ ಎಂಥ ರಾಜ್ಯಾಡಳಿತ. ದಿನಗಳೆದಂತೆ ಹಸ್ತಿನಾವತಿ ಯಾವ ರೀತಿಯಲ್ಲೂ ಸುಖ ಕೊಡುವುದಿಲ್ಲ. ಮನಸ್ಸಿಗೆ ನೆಮ್ಮದಿ ಕೊಡುವುದು ಸಾಧ್ಯವೇ ಇಲ್ಲ ಎಂದು ಅರಿವಿಗೆ ಬರುತ್ತಿದ್ದಂತೆ ಮನಸ್ಸು ವಿಮುಖವಾಯಿತು. ಎಲ್ಲಿ ನೋಡಿದರೂ ರಾಜ್ಯವಾಳುವ ಅಥವಾ ಸಾಮ್ರಾಜ್ಯ ಎನ್ನುವ ಭಾವವೇ ಬರುತ್ತಿರಲಿಲ್ಲ. ಹಲವು ದೇಶಗಳಿಂದ ಜನರನ್ನು ಆಹ್ವಾನಿಸಿದ. ಜಗತ್ತಿನ ಯಾರು ಬೇಕಾದರೂ ಹಸ್ತಿನಾಪುರದಲ್ಲಿ ಬಂದು ನೆಲೆಸಿ ಎಂದ. ಪ್ರತಿಭಾವಂತರಿಗೆ ಮನ್ನಣೆ ಎಂದ. ಉಹೂಂ, ಏನೆಂದರೆ ಏನೂ ಬದಲಾವಣೆ ಬರಲಿಲ್ಲ. ಹುಟ್ಟಿದ ತಾಯಿನಾಡಿನ ಜನರು ತಾವಾಗೇ ಹುಟ್ಟಿಸುವ ಕಲರವ ಮತ್ತೊಮ್ಮೆ ಹಸ್ತಿನಾವತಿಯ ಅಂಗಳದಲ್ಲಿ ಕೇಳಲೇ ಇಲ್ಲ. ಯಾರ ಬದುಕೂ ಮೊದಲಿನ ಹಾಗೆ ಅರಳಲೇ ಇಲ್ಲ. ಏನಿದೆ, ಏನಿಲ್ಲ. ಶತ್ರು ಭಯವಿರಲೇ ಇಲ್ಲ. ರಕ್ಷಣೆ ಅದ್ಭುತವಾಗಿತ್ತು. ರಾಜಧನ ಸಹಾಯ, ಮಳೆ, ಬೆಳೆ ಎಲ್ಲ ಅದ್ಭುತ. ಆದರೇನು, ಸತ್ತವರ ಶವದ ಮೇಲೆ ಬೆಳೆದ ಬೆಳೆಯ ಕಾಳುಗಳು ಜನರಿಗೆ ಮರಣ ಸಮಾನ ಎನ್ನಿಸುತ್ತಿದ್ದವು. ಪ್ರತೀ ಮನೆಯಲ್ಲೂ ಸೂತಕದ ಛಾಯೆ ದಶಕಗಳಾದರೂ ಕಳೆಯಲೇ ಇಲ್ಲ. ವಿಧವೆಯರಾದವರ ಕಣ್ಣೀರೂ ಕರಗಲಿಲ್ಲ. ಬದುಕು ಮತ್ತ್ಯಾವತ್ತೂ ಹಸ್ತಿನಾವತಿಯ ಅಂಗಳದಲ್ಲಿ ಅರಳಲು ಸಾಧ್ಯವಿಲ್ಲ ಎಂಬುವುದು ಧರ್ಮಜನಿಗೆ ಅತ್ಯಂತ ಸ್ಪಷ್ಟವಾಗಿ ಉಲ್ಲೇಖವಾಗಿಬಿಟ್ಟಿತ್ತು.

ಅದಕಿಂತಲೂ ಬೇರೇನೂ ಮಾಡಿದರೂ ಮೊದಲಿನ ಸಾಮ್ರಾಜ್ಯದ ಕಳೆ ಮರಳುವುದು ಸಾಧ್ಯವೇ ಇರಲಿಲ್ಲ. ಸುಯೋಧನ ಎಲ್ಲವನ್ನು ಹೇಳಿದಂತೆ ಮಾಡಿದ್ದ. ಅದಕ್ಕೂ ಮಿಗಿಲು ಅವನ ಕಾಲಾವಧಿಗೆ ಪ್ರತಿಯೊಂದೂ ಮುಗಿಯಿತು ಎನ್ನುವಂತಾಗಿಬಿಟ್ಟಿತ್ತು.

ಅರಮನೆಯಲ್ಲೂ ಎಲ್ಲ ಶಾಂತಿ ಶಾಂತಿ ಶಾಂತಿ...

ಜೀವ, ಮನಸ್ಸು ಎರಡೂ ಭೌತಿಕ ಆಯಾಮಗಳ ಸಂಪರ್ಕ ಸಂವಹನದಿಂದ ಮುಕ್ತವಾಗತೊಡಗಿದಂತೆ, ಯುಧಿಷ್ಠಿರ ಎಲ್ಲರೆದುರಿಗೆ ತಾವೆಲ್ಲ ವಾನಪ್ರಸ್ಥಾಶ್ರಮ ಸ್ವೀಕರಿಸುವ ವಿಚಾರ ಮಂಡಿಸಿದ.

ಬೇಡ ಎನ್ನಲು ಯಾರಿಗೂ ಕಾರಣವಿರಲಿಲ್ಲ.

ಇನ್ನು ಬದುಕಿದ್ದು ಮಾಡುವಂತಹದ್ದೇನೂ ಇರಲಿಲ್ಲ.

ಬದುಕುತ್ತಿರುವ ಬದುಕಿಗೂ, ಅರಮನೆಯಲ್ಲಿ ತೆಪ್ಪಗಿದ್ದವರಿಗೂ, ನೆಮ್ಮದಿಗೂ ಯಾವ ಅರ್ಥವೂ ಉಳಿದಿರಲಿಲ್ಲ. ಬದುಕಿಗೆ ಬೇಕಾದುದೆಲ್ಲವನ್ನು ಗಳಿಸುತ್ತಿದ್ದೇವೆನ್ನುವ ನಂಬಿಕೆಯಲ್ಲಿ ಎಲ್ಲವನ್ನೂ ಕಳೆದುಕೊಂಡಾಗಿತ್ತು. ಸುಯೋಧನನ ಮಾತು ಅಕ್ಷರಶಃ ನಿಜವಾಗಿತ್ತು. ಅವನು ಸಂಪೂರ್ಣ ಆಡಳಿತ ಅನುಭೋಗಿಸಿ, ಹಸ್ತಿನಾವತಿಯ ಉತ್ತುಂಗಕ್ಕೆ ಒಯ್ದು ಜನರನ್ನೂ ಸುರಕ್ಷಿತವಾಗಿಸಿ ಎಲ್ಲ ಒಂದು ಹದಕ್ಕೆ ತಂದಿದ್ದನಲ್ಲ. ಅದಕ್ಕಿಂತ ಮಿಗಿಲು ಇನ್ನೇನೂ ಆಗಲು ಸಾಧ್ಯವಿರಲಿಲ್ಲ. ಆಗಬಹುದಾಗಿತ್ತಾದರೂ ಅದೀಗ ಉಳಿದಿರಲೇ ಇಲ್ಲ.

ಕುರುಕ್ಷೇತ್ರ ಎನ್ನುವ ಯುದ್ಧಕ್ಕೆ ಬದುಕಲು ಯೋಗ್ಯವಾದುದೆಲ್ಲ ಬಲಿಯಾಗಿತ್ತು.

ಇತ್ತ ದುಗುಡ, ಬೇಗೆಯಲ್ಲೇ ಧೃತರಾಷ್ಟ್ರ ಕಾಡ್ಗಿಚ್ಚಿಗೆ ಬಲಿಯಾಗಿ ಹೋದ. ಬದುಕುವ ಉಳಿಯುವ ಆಸೆಗಳೂ ಇಲ್ಲದ ಧೃತರಾಷ್ಟ್ರ ತಾನು ಕಾಳ್ಗಿಚ್ಚಿನ ಬೆಂಕಿಗೆ ಬಲಿಯಾಗುತ್ತಿದ್ದರೂ, ತನ್ನನ್ನು ತಾನು ರಕ್ಷಿಸಿಕೊಳ್ಳುವ ಸಾಮರ್ಥ್ಯ ಇದ್ದರೂ ಸುಮ್ಮನಾಗುಳಿದುಬಿಟ್ಟನಂತೆ. ಆತ ನೋಡನೋಡುತ್ತಿದ್ದರೆ ಉರಿಯುವ ಬೆಂಕಿಗೆ ತನ್ನ ತಾನು ಬಲಿಗೊಟ್ಟುಕೊಂಡಿದ್ದ.

